ಹೋಗುತ್ತಾರೆ ಬಿಡು. ನೀನೀಗ ಏನೆಲ್ಲಾ ಮಾತನಾಡಿ ಸಮಯ ವ್ಯರ್ಥ ಮಾಡಬೇಡ. ನನಗೆ ಪ್ಯಾರಿಸಿನ ವಿಮಾನ ಹಿಡಿಯ ಬೇಕು' ಎಂದಳು ಖಾರವಾಗಿ.

ಮಿಸೆಸ್ ಫೋಸ್ಟರ್ ಮಧ್ಯೆ ಮಧ್ಯೆ ಅವನಿಗೆ ಇನ್ನೂ ವೇಗವಾಗಿ ಕಾರು ಚಲಾಯಿಸಲು ಒತ್ತಡ ಹೇರುತ್ತಲೇ ಇದ್ದಳು. ಪ್ಯಾರಿಸಿನ ವಿಮಾನ ಹೊರಡಲು ಸ್ವಲ್ಪ ಸಮಯ ಇರುವಂತೆಯೇ ಅವರು ಏರ್‌ಪೋರ್ಟ್ ತಲುಪಿದರು. ಕೊನೆಗೂ ಮಿಸೆಸ್ ಫೋಸ್ಟರಳನ್ನು ಹೊತ್ತುಕೊಂಡು ವಿಮಾನ ಅಟ್ಲಾಂಟಿಕ್ ಸಾಗರದ ಮೇಲಿಂದ ಪ್ಯಾರಿಸಿಗೆ ಹಾರತೊಡಗಿತು. ಕೊನೆಗೂ ಒಂದು ನಿಟ್ಟುಸಿರನ್ನು ಬಿಟ್ಟು ಮಿಸೆಸ್ ಫೋಸ್ಟರ್ ಆಸನಕ್ಕೊರಗಿ ಕಣ್ಣು ಮುಚ್ಚಿದಳು. ಯಾವ ಅಂಕೆಯೂ ಇಲ್ಲದೆ ಬಾನಿನಲ್ಲಿ ಸ್ವತಂತ್ರವಾಗಿ ಹಾರುತ್ತಿರುವ ಗಾಳಿಪಟದಂತೆ ಅವಳ ಮನಃಸ್ಥಿತಿಯಾಗಿತ್ತು. ಪ್ಯಾರಿಸ್ ತಲುಪಿದಾಗ ಮಿಸೆಸ್ ಫೋಸ್ಟರ್ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ಹೊಸ ಹೆಂಗಸಾಗಿದ್ದಳು.

ಮೊಮ್ಮಕ್ಕಳನ್ನು ನೋಡಿ ಅವಳಿಗೆ ತುಂಬಾ ಖುಷಿಯಾಯಿತು. ಭಾವಚಿತ್ರಗಳಲ್ಲಿರುವುದಕ್ಕಿಂತ ಅವರು ಚೆನ್ನಾಗಿ ಕಾಣುತ್ತಿದ್ದರು. ಪ್ರತಿದಿನವೂ ಅವರನ್ನು ತಿರುಗಾಡಿಸುವುದು, ಕೇಕ್ ಪೇಸ್ಟ್ರಿ ತಿನ್ನಿಸುವುದು, ಪ್ರೆಸೆಂಟ್‌ಗಳನ್ನು ಖರೀದಿಸುವುದು, ಮಲಗುವ ಮುನ್ನ ಕತೆಗಳನ್ನು ಹೇಳುವುದು ಅವಳ ನಿತ್ಯದ ಕೆಲಸವಾಯಿತು.

ಪ್ರತಿ ಮಂಗಳವಾರ ಹರಕೆ ಹೊತ್ತಂತೆ ಆಕೆ ಗಂಡನಿಗೆ ಪತ್ರ ಬರೆಯುತ್ತಿದ್ದಳು. ಹೆಚ್ಚಾಗಿ ಮೊಮ್ಮಕ್ಕಳನ್ನೇ ಕುರಿತಾಗಿ... ಅವರ ಮುಗ್ಧತೆ, ತುಂಟತನ... ಮತ್ತೆ ಕೊನೆಗೆ, 'ಸಮಯಕ್ಕೆ ಸರಿಯಾಗಿ ಊಟಮಾಡಿ, ಮಾತ್ರೆ ತಿನ್ನಿ...' ಎಂದು ಒಂದು ಸಾಲು ಬರೆಯುವುದನ್ನು ಮರೆಯುತ್ತಿರಲಿಲ್ಲ.

ಮಿಸೆಸ್ ಫೋಸ್ಟರಳ ಆರು ವಾರಗಳ ರಜೆ ಮುಗಿದು ಬಂದಂತೆ ಎಲ್ಲರಿಗೂ ಬೇಜಾರಾಗತೊಡಗಿತು. ಮಕ್ಕಳಿಗೆ ಮುತ್ತಿಕ್ಕಿ ಅವಳು ಹೊರಡಲಣಿಯಾದಾಗ ಅವು ಜೋರಾಗಿ ಅಳತೊಡಗಿದವು. ಆದರೆ ಅವಳ ಹಾವಭಾವ ಗಮನಿಸಿದಲ್ಲಿ, ಮಿಸೆಸ್ ಫೋಸ್ಟರ್ ಆದಷ್ಟು ಬೇಗ ವಾಪಸ್ಸಾಗುವವಳಂತೆ ತೋರುತ್ತಿತ್ತು.

ಒಬ್ಬ ಆದರ್ಶ ಮಡದಿಯಂತೆ ಆಕೆ ಗಂಡ ಹೇಳಿದ ದಿನದಂದು ಹಿಂದೆ ಹೊರಟಳು. ಗಂಡನಿಗೊಂದು ಟೆಲಿಗ್ರಾಂ ಕೊಟ್ಟು ಮಿಸೆಸ್ ಫೋಸ್ಟರ್ ವಿಮಾನ ಹತ್ತಿದಳು.

ಮಿಸೆಸ್ ಫೋಸ್ಟರ್ ನ್ಯೂಯಾರ್ಕ್ ತಲುಪಿದಾಗ ಅವಳನ್ನು ಎದುರುಗೊಳ್ಳಲು ಮಿಸ್ಟರ್ ಫೋಸ್ಟರ್ ಏರ್‌ಪೋರ್ಟಿಗೆ ಬರುವುದಿರಲಿ ಕಾರನ್ನೂ ಕಳುಹಿಸಿರಲಿಲ್ಲ. ಅವಳಿಗೆ ಆಶ್ಚರ್ಯವಾಯಿತಾದರೂ ಅದರ ಬಗ್ಗೆ ಹೆಚ್ಚು ಯೋಚಿಸಲಿಲ್ಲ. ಕೂಲಿಯವನಿಗೆ ತುಸು ಹೆಚ್ಚೇ ದುಡ್ಡು ಕೊಟ್ಟು ಸಾಮಾನುಗಳನ್ನು ಟ್ಯಾಕ್ಸಿಗೆ ತುಂಬಿಸಿದಳು.

ನ್ಯೂಯಾರ್ಕ್ ಪ್ಯಾರಿಸಿಗಿಂತ ತಣ್ಣಗಿತ್ತು. ಚರಂಡಿಗಳಲ್ಲಿ ಹಿಮದ ತುಂಡುಗಳು ಬಿದ್ದಿದ್ದವು. ಟ್ಯಾಕ್ಸಿ ಮನೆಯನ್ನು ತಲುಪಿತು. ಡ್ರೈವರನಿಗೆ ಪುಸಲಾಯಿಸಿ ದೊಡ್ಡ ಸೂಟುಕೇಸುಗಳನ್ನು ಮಿಸೆಸ್ ಫೋಸ್ಟರ್ ಮೆಟ್ಟಿಲುಗಳವರೆಗೆ ತರಿಸಿದಳು. ಅವನ ಬಾಡಿಗೆಯನ್ನು ಕೊಟ್ಟು ಕರೆಗಂಟೆಯನ್ನು ಒತ್ತಿದಳು. ಸ್ವಲ್ಪ ಹೊತ್ತು ಕಾದಳಾದರೂ ಯಾರೂ ಬಾಗಿಲು ತೆರೆಯಲಿಲ್ಲ. ಅವಳು ಮತ್ತೊಮ್ಮೆ ಕರೆಗಂಟೆಯನ್ನು ತುಸು ದೀರ್ಘವಾಗಿ ಒತ್ತಿದಳು. ಆದರೂ ಯಾವುದೇ ಪ್ರತಿಕ್ರಿಯೆಗಳಿಲ್ಲ. ಪರ್ಸಿನಿಂದ ಬೀಗದ ಕೈಯನ್ನು ತೆಗೆದು ಮಿಸೆಸ್ ಫೋಸ್ಟರ್ ಬಾಗಿಲನ್ನು ತೆರೆದಳು.

ಬಾಗಿಲು ತೆರಯುತ್ತಿದ್ದಂತೆಯೇ, ಅವಳ ಕಣ್ಣಿಗೆ ಬಿದ್ದಿದ್ದು ಲೆಟರ್ ಬಾಕ್ಸಿನಿಂದ ನೆಲದ ಮೇಲೆ